(೧೬) ಕೊಡಗಿನಲ್ಲಿರುವ ಅರಣ್ಯ ಪೋಲೀಸ್ ಸೂಪರಿಂಟೆಂಡೆಂಟ್‌ರ ಕಚೇರಿಯನ್ನು ಸ್ಥಳಾಂತರಿಸದೇ ಇರುವುದು

ಶ್ರೀಮತಿ ಸುಮಾ ವಸಂತ.—ಕೊಡಗಿನ ಅರಣ್ಯವನ್ನು ಕಳ್ಳಸಾಗಾಣಿಕೆದಾರರು ನಾಶಪಡಿಸುತ್ತಿದ್ದಾರೆ ಮತ್ತು ಪರರಾಜ್ಯಕ್ಕೆ ಮರಗಳನ್ನು ಸಾಗಿಸುವುದನ್ನು ನಿಲ್ಲಿಸುವುದಕ್ಕೋಸ್ಕರ ಅರಣ್ಯ ಪೋಲೀಸ್ ಸೂಪರಿಂಟೆಂಡೆಂಟ್‌ರವರ ಕಚೇರಿಯನ್ನು ಸ್ಥಾಪಿಸಿದರು. ಆದರೆ ಈ ಕಚೇರಿಯನ್ನು ಈಗ ಮೈಸೂರಿಗೆ ಸ್ಥಳಾಂತರಿಸುತ್ತಿದ್ದಾರೆನ್ನುವ ವದಂತಿ ಇದೆ. ಕೊಡಗಿನಲ್ಲಿ ಮರಗಳ್ಳತನ ಇನ್ನೂ ನಿಂತಿಲ್ಲ. ಈ ಕಚೇರಿಯನ್ನು ಸ್ಥಳಾಂತರಿಸಿದಲ್ಲಿ ಇನ್ನೂ ಹೆಚ್ಚಿನ ಕಳ್ಳಸಾಗಾಣಿಕೆಗೆ ಅನುಕೂಲವಾಗುತ್ತದೆ. ಅಲ್ಲದೆ ಈ ಕಚೇರಿಯನ್ನು ಸ್ಥಳಾಂತರಿಸಲು ಬಲವುಳ್ಳ ಮರಗಳ್ಳರೇನಾದರೂ ಕುಮ್ಮಕ್ಕು ನೀಡುತ್ತಿದ್ದಾರೆಯೇ? ಎನ್ನುವ ಭಾವನೆ ಜನರಲ್ಲಿ ಮೂಡಿದೆ. ಆದಕಾರಣ ಈ ಕಚೇರಿಯನ್ನು ಪಾಡಿಕೇರಿಯಿಂದ ಮೈಸೂರಿಗೆ ಸ್ಥಳಾಂತರಿಸಬಾರದಾಗಿ ಮಾನ್ಯ ಅರಣ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅರಣ್ಯ ಸಚಿವರಿಂದ ಉತ್ತರ ತರಿಸಿ ಹೇಳುತ್ತೇನೆ.

ಶಾಸನ ರಚನಾ ಕಾರ್ಯಕಲಾಪಗಳು

ಅಧ್ಯಕ್ಷರು.—ಈಗ ಶಾಸನ ರಚನೆ.

ಶ್ರೀ ಡಿ.ಎ. ಚಿನ್ನಪ್ಪ.—ಅಧ್ಯಕ್ಷರೆ, ನಮ್ಮದು ಬರಲಿಲ್ಲಪಲ್ಲ.

ಅಧ್ಯಕ್ಷರು.—ಇವತ್ತು ಸಾಕಷ್ಟು ಹಾಕಿದ್ದೇನೆ,

ಶ್ರೀ ಡಿ.ಎ. ಚಿನ್ನಪ್ಪ.—ಎಷ್ಟೋ ಜನ ಹಾಜರಿಲ್ಲ. ಅದರ ಬದಲು ತೆಗೆದುಕೊಳ್ಳಬಹುದಲ್ಲ. ತಮಗೆ ಯಾವ ರೀತಿ ಸಲ್ಲಿಸಬೇಕೋ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಡಿ.ಎ. ಚಿನ್ನಪ್ಪ.—ದಿವಸಕ್ಕೆ ಒಂದೊಂದು ರೀತಿ ಮಾಡಿದರೆ ಹೇಗಾಗುತ್ತದೆ? ನಮಗೆ ತಾರತಮ್ಯವಾಗುತ್ತಿದೆ. ಬಹಳ ಅನ್ಯಾಯವಾಗುತ್ತಿದೆ.

ಅಧ್ಯಕ್ಷರು.—ಅನ್ಯಾಯ ಆಗಿದ್ದರೆ ನಾಳೆ ಸೇರಿಸುತ್ತೇನೆ,

ಶ್ರೀ ಡಿ.ಎ. ಚಿನ್ನಪ್ಪ.—ಆಗುವುದಿಲ್ಲ,

ಅಧ್ಯಕ್ಷರು.—ಇಷ್ಟೆಲ್ಲಾ ನಾನು ತಮಗೆ ಅವಕಾಶ ಕೊಟ್ಟರೂ ಹೀಗೆ ಹೇಳುವುದಾದರೆ ನೀವು ಅವಕಾಶವನ್ನು ದುರುಪಯೋಗ ಪಾಡಿಕೊಳ್ಳಲಿಕ್ಕೆ ಹತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ, ನೀವು ಹೀಗೆ ಹೇಳಿದರೆ ಅರ್ಥ ಏನು? ನೀವು ೯–೩೦ಕ್ಕೆ ಕೊಟ್ಟಿದ್ದೀರಿ. ನಾವು ಉತ್ತರ ತರಿಸಬೇಕೋ ಬೇಡವೋ? ಅದಷ್ಟು ಉತ್ತರ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅನಿವಾರ್ಯ ಪ್ರಸಂಗ ಬಂದಾಗ ಮುಂದಕ್ಕೆ ಹಾಕಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಇದರ ಬಗ್ಗೆ ಒಂದು ತಿಳುವಳಿಕೆ ಆಗಿದೆ. ಇವತ್ತು ಕೊಟ್ಟ ತಿಳಿಗಿರ ನೋಟೀಸ್‌ಗಳು ನಾಳೆ ಬರುತ್ತವೆ. ಇವತ್ತು ಕೊಟ್ಟಿದ್ದು ಇವತ್ತೇ ಬರುವುದಿಲ್ಲ. ಉತ್ತರ ಕೊಡುವುದಕ್ಕೆ ಸರ್ಕಾರಕ್ಕೆ ಅವಕಾಶ ಬೇಕು ಎಂಬ ದೃಷ್ಟಿಯಿಂದ ಮರು ದಿವಸ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ, ರಾಮಪ್ಪ.—ನಾಳೆ ಕೊಟ್ಟಿದ್ದು?

ಅಧ್ಯಕ್ಷರು.—ನಾಡಿದ್ದು ಬರುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—೨೨೪ ಜನ ಸದಸ್ಯರದೂ ಒಂದೇ ದಿನ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ೧೦೦ ಜನ ಸದಸ್ಯರು ಕೊಟ್ಟರೆ ೧೦೦ ಜನರದೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆಯ್ಕೆ ಮಾಡಬೇಕಾಗುತ್ತದೆ.